Sri S. NIJALINGAPPA.—Government is thinking of waiving any assessment that may be due from these land owners.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗತಾನೇ ಮಾನ್ಯ ಮುಖ್ಯ ಮಂತ್ರಿಗಳು ಅನ್‌ಆಥರೈಜ್ಡ್ ಕಲ್ಟಿವೇಷನ್ ಅಲ್ಲಿರುವುದರಿಂದ ಟೇಲ್ ಎಂಡ್ ಲ್ಯಾಂಡ್‌ವರೆಗೂ ನೀರು ನರಬರಾಜು ಆಗುತ್ತಿಲ್ಲ ವೆಂದು ಹೇಳಿದರು. ಓಟ್ಟು ಅಚಾಕಟ್ ಅಂದಾಜನ್ನು ಇಟ್ಟುಕೊಂಡು ತಾನೆ ಈ ಚಾನಲ್ಲನ್ನು ನಿರ್ಧಾರ ಮಾಡಿರುವುದು ?

ಶ್ರೀ ಎಸ್. ನಿಜಲಿಂಗಪ್ಪ.—ಜನರಲ್ಲಿ ಕೆಲವರು ಸ್ವಲ್ಪ ಪ್ರಾಮಾಣಿಕರಾಗಿರುವುದಿಲ್ಲ. ಕೆಲವರು ನೀರು ಸಿಗುವುದನ್ನು ತಪ್ಪಿಸುವುದಕ್ಕೋಸ್ಕರ ಪ್ರಯತ್ನ ಮಾಡುತ್ತಾರೆ. ಅಂತಹವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಜುರ್ಮಾನೆ ವಗ್ಗೈರೆ ಹಾಕುತ್ತಿದ್ದೇವೆ. ಆದರೂ ಕೆಲವರು ಇನ್ನೂ ಮಾಡು ತ್ತಿದ್ದಾರೆ.

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ಕೊನೆಯಲ್ಲಿರುವ ಜಮೀನಿನವರಿಗೆ ನೀರು ಸಿಕ್ಕುತ್ತಾ ಇಲ್ಲ. ಮೇಲಿನವರು ಅನ್ಯಾಯವಾಗಿ ನೀರನ್ನು ಉಪಯೋಗಿಸುತ್ತಿದ್ದಾರೆ. ಅಂತಹವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೀರಾ ? ಮತ್ತು ನೀರು ಉಪಯೋಗಿಸದೆ ಇರುವವರಿಂದ ವಾಟರ್ ರೇಟನ್ನು ವಸೂಲು ಮಾಡುವುದನ್ನು ಬಿಟ್ಟುಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ವಸೂಲು ಮಾಡುವುದಿಲ್ಲವೆಂದು ಈಗಾಗಲೇ ಹೇಳಿದ್ದೇವೆ. ಅದೇ ವಿಚಾರದಲ್ಲಿ ಸರ್ಕಾರ ಆಜ್ಞೆ ಮಾಡುತ್ತಿದೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ನೀರು ಅನ್ಯಾಯವಾಗಿ ಉಪಯೋಗಿಸುವವರ ಮೇಲೆ ಬರೀ ಜುರ್ಮಾನೆ ಹಾಕಿದರೆ ಅದರಿಂದ ಸರಿಯಾದ ಪರಿಣಾಮಬಾಗುವುದಿಲ್ಲ. ಆದ್ದರಿಂದ ಅಂತಹವರ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ನೀರನ್ನು ಅನ್ಯಾಯವಾಗಿ ಉಪಯೋಗಿಸುವವರಿಗೆ ಹೆಚ್ಚಿನ ಶಿಕ್ಷೆ ಮಾಡಬೇಕೆಂಬುದಾಗಿಯೇ ಉದ್ದೇಶ. ಅದಕ್ಕಾಗಿ ಒಂದು ಮಸೂದೆಯೂ ತಯಾರಾಗುತ್ತಿದೆ.

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ಈಗ ಬಳ್ಳಾರಿಯಲ್ಲಿ ಏನಾಗಿದೆ ಎಂದರೆ ನೀರಾವರಿ ಗೊಳಿಸಿರತಕ್ಕ ಪ್ರದೇಶದ ಕೊನೆಯಲ್ಲಿರುವ ಜಮೀನುಗಳಿಗೆ ನೀರು ನರಬರಾಜು ಆಗದೆ ಇದ್ದರೂ ವಾಟರ್ ರೇಟನ್ನು ಕರೆಕ್ಟ್ ಮಾಡುತ್ತಿದ್ದಾರೆ. ಆದ್ದರಿಂದ ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತನ್ನು ನೆರವೇರಿಸಿಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಕೆಲಸವನ್ನು ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ ಎಂದು ನಾನು ಹೇಳಿದ್ದೇನೆ.

Extent of P.W.D. Road in Dharwar District.

*Q.—559. Sri T. K. KAMBLI (Kundgol).—

Will the Government be pleased to state :—

(*a*) the extent of P.W.D. Road in Dharwar District (Talukwar figures may be given) ;

(*b*) the extent of P.W.D. Road newly constructed in the said district (Talukwar figures may be furnished) within the last 3 years ;

(*c*) whether they would take over more number of roads to the P.W.D. in Kundgol Taluk and effect improvements to such roads in view of inadequate transport and communication facilities in the taluk ?

A.—Sri G. B. SHANKAR RAO (Parliamentry Secretary to the Minister for Public Works).—

(*a*) *Vide* Statement I given below.

(*b*) *Vide* Statement II given below.

(*c*) This will be considered according to availability of funds and importance of the roads.

STATEMENT. I

	Name of Taluk.		M.	F.	Ft.
1	Dharwar	...	126	2	426
2	Hubli	...	57	0	516
3	Kundgol	...	38	3	0
4	Kalghatgi	...	51	6	0
5	Ron	...	102	1	0
6	Shirahatti	...	78	5	0
7	Nargund	...	31	6	0
8	Navalgund	...	99	5	330
9	Mundargi	...	51	0	0
10	Haveri	...	72	1	0
11	Hangal	...	89	2	0
12	Shiggaon	...	116	4	495
13	Ranibennur	...	97	1	0
14	Hirekerur	...	87	2	330
15	Byadgi	...	37	2	0
Dharwar District : Total		...	1,136	3	117

STATEMENT. II

	Name af Taluk.		M.	F.	Ft.
1	Hubli	...	5	2	0
2	Gadag	...	7	0	0
3	Nargund	...	4	0	0
4	Ron	...	4	0	0
5	Haveri	...	8	7	0
6	Hirekerur	...	12	0	0
7	Byadgi	...	13	1	0
Dharwar District : Total		...	54	2	0

ಶ್ರೀ ಟಿ. ಕೆ. ಕಂಬಳಿ.—ಧಾರವಾಡ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯ ಉದ್ದವನ್ನು ತಾಲ್ಲೂಕುವಾರು ಕೊಟ್ಟಿರತಕ್ಕದ್ದರಲ್ಲಿ 15 ತಾಲ್ಲೂಕಿನ ಮಾಹಿತಿಯನ್ನು ಮಾತ್ರ ಕೊಟ್ಟಿದ್ದೀರಿ, ಅದರಲ್ಲಿ 16 ತಾಲ್ಲೂಕಿನ ಮಾಹಿತಿಯನ್ನು ಕೊಡಬೇಕಾಗಿತ್ತು, ಗದಗ್ ತಾಲ್ಲೂಕಿನ ಮಾಹಿತಿಯನ್ನೂ ಕೊಡಬೇಕಾಗಿತ್ತು, ಅದನ್ನು ಇದರಲ್ಲಿ ಕೊಟ್ಟಿಲ್ಲ. ಹಾಗಾದರೆ ಗದಗ್ ತಾಲ್ಲೂಕಿನಲ್ಲಿ ರಸ್ತೆಗಳು ಇಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ಗದಗ್ ತಾಲ್ಲೂಕಿನಲ್ಲಿ ರಸ್ತೆಗಳು ಇವೆ. ಆದರೆ ಅವು ಲೋಕೋಪಯೋಗಿ ಇಲಾಖೆಗೆ ಸೇರಿದ್ದಲ್ಲ. ಅವು ಜಿಲ್ಲಾ ಬೋರ್ಡಿಗೆ ಸೇರಿದ್ದು.

ಶ್ರೀ ಜಿ. ಬಿ. ಶಂಕರ ರಾವ್.—ಅದು ಬಿಟ್ಟುಹೋಗಿದೆ. ಆ ಮಾಹಿತಿ ಬೇಕಾದರೆ ಮಾನ್ಯ ಸದಸ್ಯರಿಗೆ ತರಿಸಿಕೊಡುತ್ತೇನೆ.

ಶ್ರೀ ಟಿ. ಕೆ. ಕಂಬಳಿ.—ಧಾರವಾಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ಸೇರಿದ ಒಟ್ಟು ರಸ್ತೆಯ ಉದ್ದ 1,136 ಮೈಲಿಗಳು ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ, ಅದರಲ್ಲಿ ಗದಗ್ ಸೇರಿದೆಯೋ ಅಥವಾ ಬಿಟ್ಟುಹೋಗಿದೆಯೇ? ಹಾಗಾದರೆ ಗದಗ್‌ನಲ್ಲಿ ಎಷ್ಟು ಮೈಲಿ ರಸ್ತೆ ಇದೆ?

(*No Reply*).

Sri SIDDAIAH KASHIMATH.—In answer to (*b*) you have said that within three years you have constructed in 7 taluks 54 miles and 2 furlongs. Why no road has been taken up in Shirahatti and Kundgol?

Sri G. B. SHANKAR RAO.—These new roads have been taken up, keeping in view the backwardness of the area in respect of communications.

ಶ್ರೀ ಎ. ಜೆ. ದೊಡ್ಡಮೇಟಿ.—(ಬಿ) ಪ್ರಶ್ನೆಗೆ ಉತ್ತರವಾಗಿ ಹೊಸದಾಗಿ 54 ಮೈಲಿ ರಸ್ತೆಯನ್ನು ನಿರ್ಮಿಸಿದ್ದೇವೆಂದು ಹೇಳಿದ್ದೀರಿ, ಕಳೆದ ಮೂರು ವರ್ಷಗಳಲ್ಲಿ ಈ ಪ್ರಕಾರವಾಗಿ ಬೇರೆ ಬೇರೆ ತಾಲ್ಲೂಕುಗಳಲ್ಲಿ ಮಾಡಿರುವ ರಸ್ತೆಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ತೆಗೆದುಕೊಳ್ಳುವುದಕ್ಕೆ ಮುಂಚೆಯೇ ಅವುಗಳನ್ನು ನಿರ್ಮಿಸಿದ್ದಿರಾ ಹೇಗೆ? ಮತ್ತು ಆ ರಸ್ತೆಗಳನ್ನು ನಿರ್ಮಿಸುವಾಗ ಜನಸಂಖ್ಯೆಯ ಮೇಲೆ ಮೈಲೇಜ್ ಇಟ್ಟುಕೊಂಡು ಅದಕ್ಕನುಸಾರವಾಗಿ ನಿರ್ಮಿಸಿದ್ದಿರಾ, ಅಥವಾ ಎಲ್ಲಾ ತಾಲ್ಲೂಕುಗಳಲ್ಲಿಯೂ ಒಂದೇ ಸಮನಾಗಿರಬೇಕು ಎಂದು ಸಮಾನ ದೃಷ್ಟಿ ಇಟ್ಟುಕೊಂಡು ಆ ರಸ್ತೆಗಳನ್ನು ನಿರ್ಮಿಸಿದ್ದೀರಾ? ಯಾವುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ರಸ್ತೆಗಳನ್ನು ತೆಗೆದುಕೊಂಡಿದ್ದೀರೀ?

ಶ್ರೀ ಜಿ. ಬಿ. ಶಂಕರ ರಾವ್.—ಈಗ 54 ಮೈಲಿ ರಸ್ತೆಯನ್ನು ತೆಗೆದುಕೊಂಡಿರುವುದೆಲ್ಲ ಪಬ್ಲಿಕ್ ವರ್ಕ್ಸ್ ಇಲಾಖೆಯ ರಸ್ತೆಯಲ್ಲ. ಅವುಗಳಿಗೆ ಬಡ್ಜೆಟ್ಟಿನಲ್ಲಿ ಪ್ರಾವಿಜನ್ ಮಾಡಿ ಹೊಸದಾಗಿ ಮಾಡಿದಂತಹ ರಸ್ತೆಗಳು ಎಂದು ಹಾಕಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ತಾವು ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ ನಿರ್ಮಿಸಿದಂತಹ ರೋಡಿನ ಉದ್ದವನ್ನು ಕೊಟ್ಟಿದ್ದೀರಿ, ಲೋಕಲ್ ಬೋರ್ಡುಗಳ ಮುಖಾಂತರವೂ ತೆಗೆದುಕೊಂಡ ರಸ್ತೆಗಳು ಇದರಲ್ಲಿ ಸೇರಿವೆಯೇ?

Sri G. B. SHANKAR RAO.—I want notice, Sir.

ಶ್ರೀ ಟಿ. ಕೆ. ಕಂಬಳಿ.—ಈಗ ತಾವು ಉತ್ತರದಲ್ಲಿ ಹುಬ್ಬಳ್ಳಿಯಲ್ಲಿ 57 ಮೈಲಿ ರಸ್ತೆಯನ್ನು ತೆಗೆದುಕೊಳ್ಳಲಾಗಿದೆ, ಮತ್ತು ಕುಂದಗೋಳ್‌ನಲ್ಲಿ 38 ಮೈಲಿ ರಸ್ತೆಯನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದೀರಿ, ಅದರಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯ ರೋಡು ಎಷ್ಟು? ಲೋಕಲ್ ಬೋರ್ಡ್ ರಸ್ತೆ ಎಷ್ಟು?

ಶ್ರೀ ಜಿ. ಬಿ. ಶಂಕರ ರಾವ್.—ಪಬ್ಲಿಕ್ ವರ್ಕ್ಸ್ ಇಲಾಖೆಯ ರಸ್ತೆಗಳಿಗೆ ಸಂಬಂಧಪಟ್ಟ ಇನ್‌ಫರ್‌ಮೇಷನ್ ನನ್ನ ಹತ್ತಿರ ಇದೆ. ಮಾನ್ಯ ಸದಸ್ಯರಿಗೆ ಬೇಕಾದರೆ ಅದನ್ನೂ ಕೊಡುತ್ತೇನೆ.

ಶ್ರೀ ಟಿ. ಕೆ. ಕಂಬಳಿ.—ಕೆಲವು ಸ್ಥಳಗಳಲ್ಲಿ ಒಂದು ಮೈಲಿ ರಸ್ತೆಯೂ ಇಲ್ಲದೆ ಇರುವುದಕ್ಕೆ ಕಾರಣವೇನು?

ಶ್ರೀ ಜಿ. ಬಿ. ಶಂಕರ ರಾವ್.—ರಸ್ತೆಗಳನ್ನು ಮಾಡುವುದಕ್ಕೆ ಕಾರಣ ಎಲ್ಲೆಲ್ಲಿ ರಸ್ತೆಗಳ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ರಸ್ತೆಗಳನ್ನು ಮಾಡಿದೆ. ಎಲ್ಲಿ ರಸ್ತೆಯನ್ನು ಮಾಡಲ್ಲವೋ ಅಲ್ಲಿ ರಸ್ತೆಯ ಅವಶ್ಯಕತೆ ಇಲ್ಲ, ಆದ್ದರಿಂದ ಅಲ್ಲಿ ರಸ್ತೆಯನ್ನು ಮಾಡಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಇನ್ನು ಮುಂದೆ ಸರ್ಕಾರದವರು ಪಬ್ಲಿಕ್ ವರ್ಕ್ಸ್ ರೋಡುಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಎಲ್ಲೆಲ್ಲಿ ಮಾರ್ಗಗಳು ಕಡಿಮೆ ಇವೆ ಆಯಾ ತಾಲ್ಲೂಕಿನ ವಿಸ್ತೀರ್ಣ ಏನು ಎಂಬುದನ್ನೆಲ್ಲಾ ಲಕ್ಷ್ಯದಲ್ಲಿಟ್ಟುಕೊಂಡು ಆ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಜಿ. ಬಿ. ಶಂಕರ ರಾವ್.—ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ಗೆ ರೋಡುಗಳನ್ನು ತೆಗೆದುಕೊಳ್ಳಬೇಕಾದರೆ roads connecting the State high way, roads connecting railway stations, roads of heavy traffic and roads of importance ಈ ನಿಯಮಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಅವುಗಳನ್ನು ತೆಗೆದುಕೊಳ್ಳಬೇಕಾಗುತ್ತೆದೆ. ಆದರೆ ತಾಲ್ಲೂಕಿನ ವಿಸ್ತೀರ್ಣವಾಗಲೀ ಬೇರೆ ಯಾವ ವಿಷಯವನ್ನಾಗಲೀ ಗಮನದಲ್ಲಿಟ್ಟುಕೊಂಡು ಪಬ್ಲಿಕ್ ವರ್ಕ್ಸ್ ಇಲಾಖೆಯ ರೋಡುಗಳನ್ನು ತೆಗೆದುಕೊಂಡಿಲ್ಲ.

ಶ್ರೀ ಟಿ. ಕೆ. ಕಂಬಳಿ.—ಕುಂದಗೋಳ್ ತಾಲ್ಲೂಕಿನಲ್ಲಿ 38 ಮೈಲಿ ರಸ್ತೆಯನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ತೆಗೆದುಕೊಂಡಿದ್ದಾರೆಂದು ಹೇಳಿದ್ದೀರಿ, ಆ ರಸ್ತೆಗಳು ಚೆನ್ನಾಗಿವೆಯೇ ?

ಶ್ರೀ ಜಿ. ಬಿ. ಶಂಕರ ರಾವ್.—ಅವು ಚೆನ್ನಾಗಿವೆ ಎಂದು ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ತಾನೆ ಮಾನ್ಯ ಮಂತ್ರಿಗಳು ಹೇಳಿದರು ಕೆಲವು ಸ್ಥಳಗಳಲ್ಲಿ ರಸ್ತೆಯ ಅವಶ್ಯಕತೆ ಇರಲಿಲ್ಲ, ಅದಕ್ಕೋಸ್ಕರ ಅಲ್ಲಿ ರಸ್ತೆಯನ್ನು ಮಾಡಿಸಲಿಲ್ಲ ಎಂದು ಹಾಗಾದರೆ ಮೈಸೂರು ದೇಶದಲ್ಲಿ ರಸ್ತೆಯ ಅವಶ್ಯಕತೆ ಇಲ್ಲದೆ ಇರತಕ್ಕ ಸ್ಥಳಗಳು ಎಷ್ಟು ಇವೆ ?

ಶ್ರೀ ಜಿ. ಬಿ. ಶಂಕರ ರಾವ್.—ಆ ಇನ್‌ಫರ್‌ಮೇಷನ್ ಈಗ ನನ್ನ ಹತ್ತಿರ ಇಲ್ಲ.

Repairs to the road from Malnoor to Talikote in Shorapur taluk

*Q.—561. **Sri RAJA PID NAIK** (Shorapur).—

Will the Government be pleased to state :—

(*a*) whether they are aware that road from Malnoor to Talikote in Shorapur Taluk is in a bad condition causing inconvenience to traffic ;

(*b*) if so, whether they would take immediate action to repair the said road ?

A.—**Sri G.B. SHANKAR RAO** (Parliamentary Secretary to the Minister for Public Works).—

(*a*) Yes.

(*b*) Yes, to the extent funds permit.

Sri RAJA PID NAIK.—Sir, the road being an important link connecting three districts, will the Government take immediate action to repair the same ?

Sri G. B. SHANKAR RAO.—Sir, we have taken action to improve this road. This road falls into two Divisions and the road in the Bijapur Division has been mostly mettled and the rest of it will be taken up and completed in course of time.

ಶ್ರೀ ಎನ್. ಎಂ. ಗುರ್ರೆಡ್ಡಿ.—ಇದು ಬಹಳ ಮಹತ್ವದ ರೋಡು. ಗುಲ್ಬರ್ಗಾದಿಂದ ಮಾಲನೂರು, ಮಾಲನೂರಿನಿಂದ ತಾಳೀಕೋಟೆ ಮತ್ತು ಬಿಜಾಪುರ ಡಿಸ್ಟ್ರಿಕ್ಟಿಗೆ ರೋಡುಗಳು ಹೋಗುತ್ತವೆ. ಈ ರೋಡಿನ ಕೆಲಸವನ್ನು ಆದಷ್ಟು ಜಾಗ್ರತೆ ತೆಗೆದುಕೊಂಡು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರ ರಾವ್.—ಅದಕ್ಕೆ ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಅದನ್ನು ರಿಪೇರಿ ಮಾಡುವುದಕ್ಕೆ ಬೇಕಾದ ಮೆಟೀರಿಯಲ್ಸ್ ಎಲ್ಲವನ್ನೂ ಕಲೆಕ್ಟ್ ಮಾಡಲಾಗುತ್ತದೆ. ಇಷ್ಟರಲ್ಲೇ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

Villages that applied for Electric Power in Gulbarga Revenue Division for the last three years.

*Q.—565. **Sri J. P. SARWESH** (Serum).—

Will the Government be pleased to state :—

(*a*) the number of villages that have applied for electric power both for village electrification and I. P. Sets in Gulbarga (Revenue Division) for the last three years (District-wise information may be furnished) ;

(*b*) the number of villages with names, where work of erecting of poles and wiring is completed in the Gulbarga Division ?